ಸೃಜನಿ

I S S N: 2583-3510

SIRDF
JOURNALS

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 22-33
Bi-Monthly, Peer-Reviewed, Open Access, Indexed Journal

editor@srujani.in
www.srujani.in

# ಕಿರು ಹಣಕಾಸು ಮತ್ತು ಮಹಿಳಾ ಅಭಿವೃದ್ಧಿ

**ಸಿ.ಎಂ. ನಾಗರಾಜು[1] & ಡಾ. ನೇತಿ ಸೋಮಶೇಖರಯ್ಯ[2]**
[1]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,
[2]ನಿವೃತ್ತ ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಹಾ.ಮಾ.ನ ಸಂಶೋಧನಾ ಕೇಂದ್ರ, ಉಜಿರೆ.

***Abstract:***
*ಕಿರು ಹಣಕಾಸು ಎಂದರೆ ಸಣ್ಣ ಪ್ರಮಾಣದ ಅಥವಾ ಚಿಕ್ಕ ಮೊಬಲಗಿನ ಸಾಲವನ್ನು ಆರ್ಥಿಕ ಚಟುವಟಿಕೆಗಳಿಗೆ ನೀಡುವುದು ಎಂದರ್ಥ. ಆರ್ಥಿಕ ಚಟುವಟಿಕೆಗಳು ಎಂದರೆ ಮಾನವನು ತನ್ನ ಅಪರಿಮಿತವಾದ ಬಯಕೆಗಳನ್ನು ಈಡೇರಿಸಿಕೊಳ್ಳಲು ಹಣವನ್ನು ಸಂಪಾದಿಸುವ ಚಟುವಟಿಕೆಗಳಾಗಿವೆ. ಏಕೆಂದರೆ ಆಧುನಿಕ ಹಣ ಸಹಿತ ಅರ್ಥವ್ಯವಸ್ಥೆಯಲ್ಲಿ ಹಣವು ತನ್ನದೆಯಾದ ಬಹುಪಕ್ಷೀಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಬಡ ಮತ್ತು ಕಡಿಮೆ ಆದಾಯವುಳ್ಳ ಕುಟುಂಬಗಳಿಗೆ ಉಳಿತಾಯ ಖಾತೆ, ಜೀವವಿಮಾ ನಿಧಿ ಮತ್ತು ಕಿರುಸಾಲ ಮುಂತಾದ ಆರ್ಥಿಕ ಸೇವೆಗಳನ್ನು ಒದಗಿಸುವ ಮೂಲಕ ಅವರ ಆದಾಯದ ಮಟ್ಟವನ್ನು ಹೆಚ್ಚಿಸಿ, ಜೀವನಮಟ್ಟ ಸುಧಾರಿಸಲು ನೆರವಾಗುವ ಪರಿಕಲ್ಪನೆಯೇ ಸೂಕ್ಷ್ಮ ಹಣಕಾಸು ಆಗಿದೆ. ಸ್ವಸಹಾಯ ಗುಂಪುಗಳು, ಚಿಕ್ಕ ಉದ್ಯಮ, ಸಣ್ಣ ವ್ಯಾಪಾರ ಮೊದಲಾದವುಗಳಿಗೆ ಸಾಲವನ್ನು ಒದಗಿಸಿ ಮಹಿಳಾ ಅಭಿವೃದ್ಧಿ ಮತ್ತು ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಕಿರು ಹಣಕಾಸು ಸಂಸ್ಥೆಗಳು ಪ್ರಮುಖಪಾತ್ರವಹಿಸುತ್ತಿವೆ.*

**Keywords:** *ಕಿರು ಹಣಕಾಸು, ಮಹಿಳಾ ಅಭಿವೃದ್ಧಿ, ಸ್ವ-ಸಹಾಯ ಸಂಘಗಳು, ಆರ್ಥಿಕ ಒಳಗೊಳ್ಳುವಿಕೆ.*

## ಪೀಠಿಕೆ

ಆರ್ಥಿಕ ಒಳಗೊಳ್ಳುವಿಕೆ ಮತ್ತು ಸಮಾನತೆಯ ದೃಷ್ಟಿಯನ್ನು ಹೊಂದಿರುವ ಸೂಕ್ಷ್ಮ ಹಣಕಾಸಿನ ಪರಿಕಲ್ಪನೆ, ಭದ್ರತೆಯಿಲ್ಲದ ಸಾಲ, ಬಡತನ ರೇಖೆಗಿಂತ ಕೆಳಗಿರುವವರಿಗೆ ಅಗತ್ಯ ಸಾಲ ನೀಡಿಕೆ, ಸ್ವಸಹಾಯ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ, ಗರಿಷ್ಠ ಸಾಲದ ಮೊತ್ತ ಮತ್ತು ದೀರ್ಘಾವಧಿ ಪಾವತಿಗೆ ಅವಕಾಶ ನೀಡುವುದು ಮುಂತಾದ ಲಕ್ಷಣಗಳನ್ನು ಹೊಂದಿವೆ. ಕಿರು ಹಣಕಾಸು ಪೂರೈಕೆ ಮಾಡುವಾಗ ಸಾಲವನ್ನು ಪಡೆಯುವ ಪ್ರತಿಯೊಂದು ಘಟಕವನ್ನು ಒಂದು ಸೂಕ್ಷ್ಮ ಘಟಕವನ್ನಾಗಿ (Micro Unit) ಪರಿಗಣಿಸಲಾಗುತ್ತದೆ.

ಕಿರು ಹಣಕಾಸು ವ್ಯವಸ್ಥೆಯನ್ನು ಹನಿ ನೀರಾವರಿಗೆ ಹೋಲಿಕೆ ಮಾಡಬಹುದು. ಮರದ/ಗಿಡದ ಬುಡಕ್ಕೆ ಹನಿ ಹನಿಯಾಗಿ ಒದಗಿಸಲಾಗುವ ನೀರನ್ನು ಬೇರಿನ ಮೂಲಕ ದೀರ್ಘವಾಗಿ ಹೀರಿಕೊಂಡು ಮರವು ಸಮೃದ್ಧಿಯಾಗಿ ಬೆಳೆಯುತದೆಯೋ ಅದೇ ರೀತಿ ಕಿರು ಹಣಕಾಸಿನ ನೆರವಿನ ಮೂಲಕ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತಿದೆ. ಅನೇಕ ಕೋಟಿ ರೂಪಾಯಿಗಳ ಬೃಹತ್ ಮೊತ್ತದ ಕೆಲವೇ ಸಾಲಗಳನ್ನು ಕಾರ್ಯ ಸಾದುವಲ್ಲದ ಕೆಲವೇ ಉದ್ಯಮಗಳಿಗೆ ಒದಗಿಸುವ ಬದಲು ಚಿಕ್ಕ ಉದ್ಯಮಗಳು ಮತ್ತು ಚಿಕ್ಕದಾದ

***Please cite this article a:*** ಸಿ.ಎಂ. ನಾಗರಾಜು & ನೇತಿ ಸೋಮಶೇಖರಯ್ಯ. (2023). ಕಿರು ಹಣಕಾಸು ಮತ್ತು ಮಹಿಳಾ ಅಭಿವೃದ್ಧಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 22–33.

ಆರ್ಥಿಕ ಚಟುವಟಿಕೆಗಳಿಗೆ ಸಣ್ಣ ಪ್ರಮಾಣದಲ್ಲಿ ಹಂತ ಹಂತವಾಗಿ ಹಣವನ್ನು ಪೂರೈಸಿದರೆ ಚಟುವಟಿಕೆಗಳು ಸದೃಢವಾಗಿ ಬೆಳೆಯುತ್ತವೆ. ಆದಾಯ ಮತ್ತು ಉದ್ಯೋಗ ಸೃಷ್ಟಿಯು ಪರಿಣಾಮಕಾರಿಯಾಗಿ ನೆರವೇರುತ್ತವೆ. ಕ್ರಿ.ಶ. 1970ರಲ್ಲಿ ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕಿನ ಮೂಲಕ ಸೂಕ್ಷ್ಮ ಹಣಕಾಸಿನ ಅಗ್ರಗಣ್ಯ ಎಂದು ಕರೆಯಲಾಗುವ ಮಹಮ್ಮದ್ ಯೂನಸ್‌ರವರು ಮೊದಲಬಾರಿಗೆ ಪರಿಚಯಿಸಿದರು.

ಭಾರತದಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಮೊದಲಬಾರಿಗೆ ಸೂಕ್ಷ್ಮ ಹಣಕಾಸು ಯೋಜನೆ ಜಾರಿಗೆ ತಂದು 1992ರಲ್ಲಿ ಬ್ಯಾಂಕುಗಳು ಮತ್ತು ಮಹಿಳಾ ಸ್ವಸಹಾಯ ಗುಂಪುಗಳ ನಡುವೆ ಬ್ಯಾಂಕು ಜೋಡಣಾ ಕಾರ್ಯವನ್ನು ಕೈಗೊಂಡಿತು. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಸ್ವಸಹಾಯ ಸಂಘಗಳು ಈ ವ್ಯವಸ್ಥೆಯಲ್ಲಿ ಭಾಗವಹಿಸುತ್ತಿರುವ ಹಣಕಾಸು ಸಂಸ್ಥೆಗಳಾಗಿವೆ. ವಿಶ್ವಸಂಸ್ಥೆಯು (ಯು.ಎನ್.ಒ.) 2005ನೆ ವರ್ಷವನ್ನು ಸೂಕ್ಷ್ಮ ಸಾಲದ 'ಅಂತರರಾಷ್ಟ್ರೀಯ ವರ್ಷ' ಎಂದು ಘೋಷಣೆ ಮಾಡಿತು. ಭಾರತ ಸರ್ಕಾರ 2000 ಆಗಸ್ಟ್ 29 ರಂದು ಸಾಲದ ಸೂಕ್ಷ್ಮ ಕ್ಷೇತ್ರವನ್ನು ಬ್ಯಾಂಕೇತರ ಹಣಕಾಸು ವಲಯದಲ್ಲಿ ಸೇರ್ಪಡೆ ಮಾಡಿದ್ದು, ವಿದೇಶಿ ಬಂಡವಾಳ ಹೂಡಿಕೆಗೂ ಅವಕಾಶ ಕಲ್ಪಿಸಿದೆ. ಇನ್ನು ಅಭಿವೃದ್ಧಿಯ ವಿಚಾರಕ್ಕೆ ಬಂದರೆ ಕಿರುಹಣಕಾಸು ಆರ್ಥಿಕವಾಗಿ ಸಕ್ರಿಯವಾಗಿರುವ ಬಡವರಿಗೆ ಅಗತ್ಯವಿರುವ ಹಣಕಾಸು ಸೇವೆಗಳನ್ನು ಪೂರೈಸುತ್ತದೆ. ಇದು ಸಣ್ಣ ಸಣ್ಣ ವಿಮಾ ಸೌಲಭ್ಯಗಳು, ಸೂಕ್ಷ್ಮ ಪಿಂಚಣಿ ಮತ್ತು ಜೀವನೋಪಾಯದ ಬೆಂಬಲವನ್ನು ಸಹ ಒಳಗೊಂಡಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಸೂಕ್ಷ್ಮ ಹಣಕಾಸು ಆರ್ಥಿಕವಾಗಿ ಕಡಿಮೆ ಸೌಲಭ್ಯ ಹೊಂದಿರುವ ಗುಂಪುಗಳಿಗೆ ಹಣಕಾಸು ಸೇವೆಗಳು ಪ್ರವೇಶವನ್ನು ಬೆಂಬಲಿಸುತ್ತದೆ.

1990 ರ ದಶಕದಿಂದ ಕಿರು ಹಣಕಾಸು ಬೃಹತ್ ಹಣ ಸಂಬಂಧಿತ ಆಯ್ಕೆಯಾಗಿದ್ದು, ಹೆಚ್ಚು ಅಭಿವೃದ್ಧಿ ಹೊಂದುತ್ತಿದ್ದು, ಬಡಜನರ ಸೂಕ್ಷ್ಮ ಚಟುಚಟಿಕೆಗಳನ್ನು ಬಲಪಡಿಸುವ ಸಮಗ್ರ ಕಾರ್ಯವಿಧಾನವಾಗಿ ತನ್ನನ್ನು ತೋರಿಸಿಕೊಳ್ಳುತ್ತಿದೆ. ಅನೇಕ ರಾಷ್ಟ್ರಗಳಲ್ಲಿ ಕಿರುಹಣಕಾಸು ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಉಪಯುಕ್ತ ಕಾರ್ಯವನ್ನು ನಿರ್ವಹಿಸುತ್ತಿದೆ. ಕಳೆದ ಮೂರು ದಶಕಗಳಲ್ಲಿ ಮಹಿಳೆಯರನ್ನು ಕೇಂದ್ರೀಕರಿಸುವ ಸ್ವಸಹಾಯ ಗುಂಪುಗಳು ಸೇರಿದಂತೆ ಕಿರುಹಣಕಾಸು ಭಾರತದಲ್ಲಿ ಬಡತನ ನಿವಾರಣ ಕಾರ್ಯಕ್ರಮಗಳ/ ಕಾರ್ಯತಂತ್ರಗಳ ಒಂದು ಮೂಲವಾಗಿ ಮಾರ್ಪಟ್ಟಿದೆ. ಕಡಿಮೆ ವೇತನ ಅಥವಾ ಕೂಲಿ ಪಡೆಯುವ ಗುಂಪಿನ ಜನರಿಗೆ ಹಣಕಾಸು ಸೇವೆಯನ್ನು ನೀಡುವುದರ ಮೂಲಕ ಬಡತನವನ್ನು ಕಡಿಮೆ ಮಾಡಲು ಮತ್ತು ವ್ಯಾಪಕ ಆರ್ಥಿಕಾಭಿವೃದ್ಧಿ ಸಾಧಿಸಲು ಅತ್ಯಂತ ಪರಿಪೂರ್ಣ ಮಾರ್ಗವಾಗಿದೆ. ರಾಷ್ಟ್ರೀಕರಣದ ನಂತರ ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಮತ್ತು ಅರೆ-ನಗರ ಪಟ್ಟಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುವ ಮೂಲಕ ಗ್ರಾಮೀಣ ಸಾಲವನ್ನು ವಿಸ್ತರಿಸುವ ಆ ಮೂಲಕ ಸರ್ಕಾರವು ಸಹ ಬಡತನ ಮತ್ತು ನಿರುದ್ಯೋಗದ ನಿವಾರಣಾ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಿದೆ.

"ಕಿರುಹಣಕಾಸು ಸಣ್ಣ ಪ್ರಮಾಣದ ಹಣಕಾಸು ಸೇವೆಗಳನ್ನು ಕ್ರೆಡಿಟ್ ಮತ್ತು ಠೇವಣಿ ಎರಡಕ್ಕೂ ಕೃಷಿ ಅಥವಾ ಗುಂಪಿನ ಜನರಿಗೆ ಒದಗಿಸಲಾಗುತ್ತದೆ. ಸರಕುಗಳನ್ನು ಉತ್ಪಾದಿಸುವ ಮರುಬಳಕೆ ಮಾಡುವ, ದುರಸ್ತಿ ಮಾಡುವ ಅಥವಾ ವ್ಯಾಪಾರ ಮಾಡುವ ಸಣ್ಣ ಅಥವಾ ಸೂಕ್ಷ್ಮ ಉದ್ಯಮಗಳನ್ನು ನಿರ್ವಹಿಸುವುದು, ಸೇವೆಗಳನ್ನು ಒದಗಿಸುವುದು. ಸಣ್ಣ ಪ್ರಮಾಣದ ಭೂಮಿ, ವಾಹನಗಳು ಹಾಗೂ ಯಂತ್ರೋಪಕರಣಗಳನ್ನು ಬಾಡಿಗೆ ಪಡೆಯುವುದರಿಂದ ಆದಾಯವನ್ನು ಗಳಿಸಲು ನೆರವಾಗಿದೆ. "ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಇತರೆ ವ್ಯಕ್ತಿಗಳು ಮತ್ತು ಸ್ಥಳೀಯ ಗುಂಪುಗಳಿಗೆ ಕಿರುಹಣಕಾಸು ಉತ್ತಮ ಸಾಧನವಾಗಿದೆ (ರಾಬಿನ್ಸ್ 1998). ಕಿರು ಹಣಕಾಸಿನ ವಿಭಾಗವು ಕಳೆದ ದಶಕಗಳಲ್ಲಿ ವೇಗವಾಗಿ ಬೆಳೆದಿದೆ." "1976 ರಲ್ಲಿ ಬಾಂಗ್ಲಾ ದೇಶದ ಗ್ರಾಮೀಣ ಬ್ಯಾಂಕ್ ಸ್ಥಾಪನೆಯೊಂದಿಗೆ ಪ್ರಗತಿ ಹೊಂದಿದ ಕಿರು ಹಣಕಾಸಿನ ಸಂಸ್ಥೆಗಳು ಸ್ಥಾಪಿಸಿದ ಕೀರ್ತಿ ನೊಬೆಲ್ ಪ್ರಶಸ್ತಿ ವಿಜೇತ ಮಹಮ್ಮದ್ ಯೂನಸ್ ಪಾತ್ರರಾಗಿದ್ದಾರೆ. ಇಂದು ಇದು ವಿವಿಧ ಉದ್ಯಮ ಮಾದರಿಗಳನ್ನು ತೋರಿಸುವ ಕ್ರಿಯಾತ್ಮಕ ಉದ್ಯಮವಾಗಿ ಪ್ರಗತಿ ಸಾಧಿಸಿದೆ. ಭಾರತದಲ್ಲಿನ ಕಿರುಬಂಡವಾಳ ಸಂಸ್ಥೆಗಳು ಎನ್.ಜಿ.ಒ.ಗಳಾಗಿ ಸಂಘಗಳು ಅಥವಾ ಟ್ರಸ್ಟ್‌ಗಳಾಗಿ ನೊಂದಾಯಿಸಲ್ಪಟ್ಟಿವೆ ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು ಆಗಿ ಅಸ್ತಿತ್ವದಲ್ಲಿವೆ. ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸಹಕಾರಿ ಸಂಘಗಳು ಮತ್ತು ಇತರ ದೊಡ್ಡ ಸಾಲದಾತರು ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಎಂ.ಎಫ್.ಐಗಳಿಗೆ ಮರುಹಣಕಾಸು ಸೌಲಭ್ಯವನ್ನು ಒದಗಿಸುವುದು. ಗುಂಪು ಸಾಲಗಾರರಿಗೆ ನೇರ ಸಾಲಸೌಲಭ್ಯಗಳನ್ನು ನೀಡಲು ಬ್ಯಾಂಕುಗಳು ಸ್ವ–ಸಹಾಯ ಗುಂಪು ಮಾರ್ಗವನ್ನು ಮತ್ತಷ್ಟು ಬಳಸಿಕೊಳ್ಳುತ್ತಿವೆ. ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ಸಹಕಾರಿ ಮಹಿಳಾ ಸ್ವಸಹಾಯ ಸಂಘಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ.

"ಔಪಚಾರಿಕ ಹಣಕಾಸು ವಲಯದಿಂದ (ಡೇನಿಯಲ್ ವಾಜರ್ ಮತ್ತು ಜಿ. ಕೋಗಿಲಾ) ಅಗತ್ಯ ಹಣಕಾಸಿನ ಸೇವೆಗಳನ್ನು ಪಡೆಯಲು ಸಾಧ್ಯವಾಗದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡಜನರಿಗೆ ಸಾಲ ಮತ್ತು ವಿಮೆಯನ್ನು ಉಳಿಸುವಂತಹ ಹಣಕಾಸು ಸೇವೆಗಳನ್ನು ಕಿರು ಹಣಕಾಸು ಒಳಗೊಂಡಿರುತ್ತದೆ." "ಪ್ರಗತಿಗೆ ಕಿರು ಬಂಡವಾಳ ಸಾಂಪ್ರದಾಯಿಕ ಬ್ಯಾಂಕಿಂಗ್ ಸೇವೆಗಳಿಗೆ ಪ್ರವೇಶವಿಲ್ಲದ ವ್ಯಕ್ತಿಗಳಿಗೆ ಸಣ್ಣ ಪ್ರಮಾಣದ ಸೇವೆಗಳನ್ನು ಒದಗಿಸುವುದು. ಕಿರು ಹಣಕಾಸು ಎಂಬ ಪದವು ಸಾಮಾನ್ಯವಾಗಿ ಸಣ್ಣ ಕೆಲಸಗಳನ್ನು ಸ್ವತಂತ್ರ ಕೆಲಸಕ್ಕಾಗಿ ಕಡಿಮೆ ವೇತನ ಪಡೆಯುವವರಿಗೆ ಸೂಚಿಸುತ್ತದೆ. ನಿಯಮಿತವಾಗಿ ಸಣ್ಣ ಉಳಿತಾಯ ನಿಧಿಗಳ ಸಂಗ್ರಹದೊಂದಿಗೆ, ಕಿರು ಬಂಡವಾಳದ ಬಾಹ್ಯರೇಖೆಯ ಮಾನದಂಡಗಳು ಬಡವರ ಅಗತ್ಯತೆಗಳು ಮತ್ತು ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳೊಂದಿಗೆ ಹುಟ್ಟಿಕೊಂಡಿವೆ, ಕಳೆದ ಮೂರು ದಶಕಗಳಲ್ಲಿ ಪ್ರಪಂಚದಾದ್ಯಂತ ಕಿರುಹಣಕಾಸು ಸಂಸ್ಥೆಗಳ ಅನುಭವದಿಂದ ಹೊರಹೊಮ್ಮಿವೆ. (ಎ. ಭಾರತಿ)"

"ಬಡತನ ಮತ್ತು ನಿರುದ್ಯೋಗವು ಯಾವುದೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದ ಮಹತ್ವ ವಿಷಯಗಳಾಗಿವೆ. ಇದಕ್ಕೆ ಭಾರತವೂ ಹೊರತಾಗಿಲ್ಲ. ಭಾರತದಲ್ಲಿ ಮಹಿಳಾ ಉದ್ಯೋಗ ಅಭಿವೃದ್ಧಿಯ ಪ್ರಮಾಣ ಕಡಿಮೆ ಇದ್ದು, ಹೊಸ ಮತ್ತು ಲಾಭದಾಯಿಕ ಉದ್ಯೋಗದ ಕಡಿಮೆ ಅಭಿವೃದ್ಧಿ ದರದ ನೇರ ಫಲಿತಾಂಶವಾಗಿದೆ. ಕಡಿಮೆ ಶ್ರಮದಿಂದ ಹೆಚ್ಚು ಆಕರ್ಷಕವಾದ ಯೋಜನೆ "ಸ್ವ–ಸಹಾಯ ಗುಂಪು" "(ಸ್ವ–ಸಹಾಯ ಸಂಘ) ಇದು ನಿರ್ಗತಿಕರನ್ನು ಬೇರು ಸಹಿತ ಕಿತ್ತು ಹಾಕಲು ಮತ್ತು ಭಾರತದಲ್ಲಿ ಮಹಿಳಾ ಉದ್ಯಮಶೀಲತೆ ಮತ್ತು ಆರ್ಥಿಕ ನೆರವು ಹೆಚ್ಚಿಸಲು ಒಂದು ಸಾಧನವಾಗಿದೆ. ಗ್ರಾಮೀಣ ಮಹಿಳೆಯರನ್ನು ಉದ್ಯಮಶೀಲ ಮಹಿಳೆಯನ್ನಾಗಿ ಮಾಡುವ ಮತ್ತು ಉದ್ಯಮಶೀಲತಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ವ–ಸಹಾಯ ಸಂಘವು ಸೂಕ್ಷ್ಮ ಕಿರುಸಾಲಗಳನ್ನು ವಿತರಿಸುತ್ತವೆ. ಸ್ವ–ಸಹಾಯ ಸಂಘಗಳು ಜೀವನ ಪ್ರಜಾಪ್ರಭುತ್ವ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಭಾಗವಹಿಸುವವರು, ನಿರ್ಧಾರ ತೆಗೆದುಕೊಳ್ಳುವವರು ಮತ್ತು ಫಲಾನುಭವಿಗಳಾಗಿ ಮಹಿಳೆಯರ ಸ್ಥಾನಮಾನ ಮತ್ತು

ಸಮಾನತೆಯನ್ನು ಹೆಚ್ಚಿಸುತ್ತದೆ. ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸ್ವ–ಸಹಾಯ ಸಂಘಗಳು ಮಹಿಳೆಯರನ್ನು ಪ್ರೋತ್ಸಾಹಿಸುತ್ತಿವೆ. (ಗುರುಮೂರ್ತಿ, 2000).

ನಬಾರ್ಡ್ (2005) ಸ್ವ–ಸಹಾಯ ಗುಂಪು "ಒಂದು ಏಕರೂಪದ ಸಮಾನವರ್ಗದ ಸುಮಾರು 15 ಜನರ ಸಾಮಾನ್ಯ ಗಾತ್ರವನ್ನು ಹೊಂದಿರುವ ಒಂದು ಗುಂಪು ಎಂದು ಸ್ಪಷ್ಟಪಡಿಸುತ್ತದೆ. ಅವರು ತಮ್ಮ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಲು ಒಗ್ಗೂಡುತ್ತಾರೆ. ನಿಯಮಿತವಾಗಿ ಉದ್ದೇಶ ಪೂರ್ವಕವಾಗಿ ಮಿತವ್ಯಯ ಹೊಂದಲು ಅವರನ್ನು ಪ್ರೋತ್ಸಾಹಿಸಲಾಗುತ್ತದೆ. ಸ್ವ–ಸಹಾಯ ಸಂಘಗಳು ಉತ್ತಮ ಹಣಕಾಸಿನ ವಹಿವಾಟನ್ನು ನಿರ್ವಹಿಸಿದ ಸಂಘಗಳಿಗೆ ಬ್ಯಾಂಕುಗಳು ಸಾಲ ನೀಡಲು ಮುಂದಾಗುತ್ತದೆ. ಸ್ವ–ಸಹಾಯ ಸಂಘ ಬ್ಯಾಂಕ್ ಸಾಲಗಳನ್ನು ಯಾವುದೇ ಭದ್ರತೆಯಿಲ್ಲದೆ ಮತ್ತು ಮಾರುಕಟ್ಟೆ ಬಡ್ಡಿದರಗಳಲ್ಲಿ ನೀಡಲಾಗುತ್ತದೆ. 1974 ರ ಬರಗಾಲದ ಸಂದರ್ಭದಲ್ಲಿ ತನ್ನ ರಾಷ್ಟ್ರವಾದ ಬಾಂಗ್ಲಾದೇಶದ ಬಡ ಉದ್ಯಮಿಗಳ ಜೀವನದ ಮೇಲೆ ಕೇಂದ್ರೀಕರಿಸುವಾಗ ಮೊಹಮ್ಮದ್ ಯೂನಸ್ ಮೊಟ್ಟ ಮೊದಲ ಬಾರಿಗೆ ಕಿರು ಹಣಕಾಸಿನ ಪರಿಭಾವನೆಯನ್ನು ಪರಿಚಯಿಸಿದನು. ಜನರು ತಮ್ಮನ್ನು ಪ್ರಾರಂಭದ ಬಾದ್ಯತೆಯಿಂದ ಮುಕ್ತಗೊಳಿಸಲು ಸಾಧ್ಯವಾಗದಿದ್ದರೆ. ಅವರು ಎಂದಿಗೂ ಅಭಿವೃದ್ದಿ ಹೊಂದುವ ಸಾಮರ್ಥ್ಯವನ್ನು ಹೊಂದುವುದಿಲ್ಲ ಎಂದು ಯಾನಸ್ ಅರ್ಥ ಮಾಡಿಕೊಂಡರು. ನಂತರ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲಾಯಿತು. ಇದು 75.7 ಶತಕೋಟಿ ಹೆಚ್ಚಿನ ಮುಂಗಡವನ್ನು ಪಾವತಿಸಿದೆ. ಮತ್ತು ಅದರಲ್ಲಿ 15.1 ಶತಕೋಟಿಗಿಂತ ಹೆಚ್ಚಿನ ಹಣವನ್ನು ಮರುಪಾವತಿ ಮಾಡಲಾಗಿದೆ ಮತ್ತು ಚೇತರಿಕೆಯ ಪ್ರಮಾಣವು ಸುಮಾರು 98.9 ಪ್ರತಿಶತದಷ್ಟಿದೆ. ಇದು 950,000 ಕ್ಕಿಂತ ಹೆಚ್ಚು ಸಾಲಗಳನ್ನಾಗಿಸಿದೆ ಮತ್ತು 6.7 ಮಿಲಿಯನ್ ವ್ಯಕ್ತಿಗಳನ್ನು ಹೊಂದಿದೆ. ಅವರಲ್ಲಿ ಶೇಕಡಾ 96 ರಷ್ಟು ಮಹಿಳೆಯರು.

"ಪ್ರಸ್ತುತ ವಿಶ್ವಜನಸಂಖ್ಯೆಯ ಸುಮಾರು 7.6 ಬಿಲಿಯನ್ ಆಗಿದ್ದು, ಇದು ಪ್ರತಿ ವರ್ಷ 9.7 ಮಿಲಿಯನ್ ಜನರ ದರದಲ್ಲಿ ಅಭಿವೃದ್ದಿ ಹೊಂದುತ್ತಿದೆ ಮತ್ತು 2025 ರ ವೇಳೆಗೆ ಇದು 8.5 ಬಿಲಿಯನ್ ಅನ್ನು ಮುಟ್ಟಲಿದೆ. ಜನಸಂಖ್ಯೆಯ ಬೆಳವಣಿಗೆಯ ಶೇಕಡಾ 95 ರಷ್ಟು ಅಭಿವೃದ್ದಿಶೀಲ ರಾಷ್ಟ್ರಗಳಲ್ಲಿರುತ್ತದೆ. ಏಷ್ಯಾದ ಜನಸಂಖ್ಯೆಯು 3.55 ಬಿಲಿಯನ್ ಆಗಿದ್ದು, ಇದು 2025 ರ ವೇಳೆಗೆ 4.54 ಬಿಲಿಯನ್ ತಲುಪಬಹುದು ಮತ್ತು ಆ ಹೊತ್ತಿಗೆ ಮಹಿಳೆಯರು ಒಟ್ಟು ವಿಶ್ವಜನಸಂಖ್ಯೆಯ ಅರ್ಧದಷ್ಟು ಭಾಗವನ್ನು ಹೊಂದಬಹುದು (ವಿ.ಕೆ.ಸಿಂಗ್, 2007)"

"ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಮಕ್ಕಳನ್ನು ಅಭಿವೃದ್ದಿ ಎಂಬ ವಿಶೇಷ ಕಾರ್ಯಕ್ರಮವು 1982 ರಲ್ಲಿ ಮಹಿಳೆಯರನ್ನು ಗುಂಪು ಚಟುವಟಿಕೆಗಳನ್ನು ಪ್ರಾರಂಭಿಸಲು ಮಿತವ್ಯಯವನ್ನು ಉತ್ತೇಜಿಸಲು ಮತ್ತು ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಹೆಚ್ಚಿನ ವಿಶ್ವಾಸವನ್ನು ನೀಡಲು ಪ್ರಾರಂಭಿಸಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಸ್ವ–ಸಹಾಯ ಗುಂಪುಗಳನ್ನು ರಚಿಸಲಾಯಿತು. 1991–92 ರಲ್ಲಿ ಸ್ವ–ಸಹಾಯ ಗುಂಪುಗಳನ್ನು ಬ್ಯಾಂಕುಗಳೊಂದಿಗೆ ಜೋಡಿಸುವ ಮೂಲಕ ಕಿರುಹಣಕಾಸು ಪೂರೈಸುವ ಪ್ರಾಯೋಗಿಕ ಯೋಜನೆಯನ್ನು ನಬಾರ್ಡ್ ಪ್ರಾರಂಭಿಸಿತು. ಅನೇಕ ಎನ್.ಜಿ.ಒಗಳು ಮುಂದೆ ಬಂದು ಸ್ವ–ಸಹಾಯ ಗುಂಪುಗಳು ಉತ್ತೇಜನ ಮತ್ತು ಮಿತವ್ಯಯ ಮತ್ತು ಸಾಲ ವಿತರಣೆಯಲ್ಲಿ ಸಜ್ಜುಗೊಳಿಸುವಲ್ಲಿ ಉತ್ತಮ ಕೆಲಸ ಮಾಡಿವೆ. ಸಣ್ಣ ಬ್ಯಾಂಕುಗಳು ಹೆಚ್ಚಿನ ವೆಚ್ಚ, ಸಾಂಪ್ರದಾಯಿಕ ಮೇಲಾಧಾರ ಕೊರತೆ ಹಣಕಾಸು ಮತ್ತು ಭೌಗೋಳಿಕ ಪ್ರತ್ಯೇಕತೆ (ದಾಸಕಲ್ಯಾಣ್) ಗಳ ಮೂಲಭೂತ ಅವಶ್ಯಕತೆಗಳನ್ನು ಕೊರತೆಯಿಂದಾಗಿ ವಾಣಿಜ್ಯ ಬ್ಯಾಂಕುಗಳಂತಹ ಔಪಚಾರಿಕ ಹಣಕಾಸು

ಸಂಸ್ಥೆಗಳು ಬಡ ಕುಟುಂಬಗಳಿಗೆ ಕಿರು ಹಣಕಾಸನ್ನು ಪೂರೈಸುವುದಿಲ್ಲ. ಗ್ರಾಮೀಣ ಸಾಲ ವ್ಯವಸ್ಥೆಯ ನಿರಾಶದಾಯಕ ಕಾರ್ಯಕ್ಷಮತೆಯು ಸ್ವ-ಸಹಾಯ ಗುಂಪುಗಳು (ಕೆ.ಜಿ.ಕರ್ಮಕರ್) ಎಂದು ಕರೆಯಲ್ಪಡುವ ಪರ್ಯಾಯ ಮತ್ತು ನವೀನ ಪ್ರಯತ್ನಗಳ ಹೊರ ಹೊಮ್ಮುವಿಕೆಗೆ ಕಾರಣವಾಗಿದೆ.

ಕರ್ನಾಟಕದಲ್ಲಿ 1984 ಮತ್ತು 1985 ರ ನಡುವೆ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿರುವ ಮತ್ತು ಕರ್ನಾಟಕ ಮೂಲದ ಮೈರಾಡಾ ಎಂಬ ಸರ್ಕಾರೇತರ ಸಂಸ್ಥೆ, (ಮೈಸೂರು ಪುನರ್ವಸತಿ ಮತ್ತು ಅಭಿವೃದ್ಧಿ ಸಂಸ್ಥೆ (ಮೈರಾಡ) ಎಂಬ ಎನ್.ಜಿ.ಓ ಭಾರತದಲ್ಲಿ ಸ್ವ-ಸಹಾಯ ಗುಂಪುಗಳನ್ನು ಮೊಟ್ಟ ಮೊದಲಿಗೆ ಪ್ರಾರಂಭಿಸಿತು. ಅದು ಸದಸ್ಯರಿಗೆ ಸಾಲ ನೀಡಲು ಅನುವು ಮಾಡಿಕೊಟ್ಟಿತು. ತರುವಾಯ ದೊಡ್ಡ ಸಹಕಾರ ಸಂಘಗಳು ಸಣ್ಣ ಗುಂಪುಗಳಾಗಿ ವಿಭಜನೆಯಾದವು ಅವುಗಳು ಮೊದಲ ಸ್ವ-ಸಹಾಯ ಗುಂಪುಗಳ ಮೂಲವಾಗಿದ್ದು, ಆ ಸಮಯದಲ್ಲಿ ಸಾಲ ನಿರ್ವಾಹಣಾ ಗುಂಪುಗಳನ್ನು ಸಾಲ ನಿರ್ವಹಣೆಯ ಮೇಲೆ ಕೇಂದ್ರೀಕರಿಸಿದವು. ಗುಂಪಿನಲ್ಲಿ ಉಳಿತಾಯ ಮಾಡುವ ಪ್ರತಿಯೊಬ್ಬ ಸದಸ್ಯರ ಕಲ್ಪನೆಯು ಶೀಘ್ರದಲ್ಲೇ ತೆರೆದುಕೊಂಡಿತು. ಅದೇ ರೀತಿ ನಿಯಮಿತ ಸಭೆಗಳು, ಪುಸ್ತಕ ನಿರ್ವಹಣೆ ಮತ್ತು ದಾಖಲೆಗಳು ಮತ್ತು ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುವಿಕೆಯ ಅಡಿಪಾಯ ಪ್ರಾಯೋಗಿಕ ಅಧ್ಯಾಯನವು (ಪಿ.ರೆಡ್ಡಿ ಮತ್ತು ಸಾಯಿ, 2000), 1996 ರಲ್ಲಿ ಎಸ್.ಹೆಚ್.ಜಿ ಬ್ಯಾಂಕು ಸಂಪರ್ಕ ಕಾರ್ಯಕ್ರಮವನ್ನು ಸಾಮಾನ್ಯ ಸಾಲ ನೀಡುವ ಚಟುವಟಿಕೆಯಾಗಿ ಪ್ರಮಾಣೀಕರಿಸುವ ವಿಶ್ವಾಸವನ್ನು ನವಾರ್ಡ್ ನೀಡಿತು. ಈ ವ್ಯವಸ್ಥೆಯು ಅಸಮಾನವಾಗಿ, ರಾಷ್ಟ್ರದಾದ್ಯಂತ ತ್ವರಿತವಾಗಿ ಹರಡಿತು. ಇದನ್ನು 2002 ರ ಹೊತ್ತಿಗೆ ವಿಶ್ವದ ಅತಿದೊಡ್ಡ ಕಿರುಬಂಡವಾಳದ ಕಾರ್ಯಕ್ರಮವನ್ನಾಗಿ ಮಾಡಿತು. ಆದ್ದರಿಂದ ಸ್ವ-ಸಹಾಯ ಗುಂಪುಗಳ ಪ್ರಗತಿಯ ಐತಿಹಾಸಿಕ ಹಿನ್ನೆಲೆಯು 1980 ರ ದಶಕದ ಮಧ್ಯಭಾಗದಲ್ಲಿ ಎನ್.ಜಿ.ಓಗಳು ಕಾರ್ಯಕ್ರಮವನ್ನು ಮುನ್ನಡೆಸಿದವು ಮತ್ತು 1980 ರ ದಶಕದ ಅಂತ್ಯದ ವೇಳೆಗೆ ನಬಾರ್ಡ್ ಮುನ್ನಡೆಸಿತು. 1990 ರ ದಶಕದಲ್ಲಿ ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕು ಸಹಕಾರದೊಂದಿಗೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಸೇರಿದಂತೆ ಆರು ರಾಜ್ಯಗಳ ಸರ್ಕಾರಗಳೊಂದಿಗೆ ಸಂಘಟಿತವಾಗಿ "ಸ್ವಶಕ್ತಿ" ಎಂಬ ತುಲನಾತ್ಮಕ ಯೋಜನೆಯನ್ನು ಪ್ರಾರಂಭಿಸಿತು. ಈ ಅನುಭವವು ಕರ್ನಾಟಕವನ್ನು ಸ್ವ-ಸಹಾಯ ಗುಂಪುಗಳ ವಿಧಾನದ ಮೂಲಕ (ಮಹಿಳಾಶಕ್ತಿ) ಎಂಬ ರಾಜ್ಯವ್ಯಾಪ್ತಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಒತ್ತಾಯಿಸಿತು. ಒಟ್ಟಾರೆ ವಿವಿಧ ಪಾಲುದಾರರ (ಸರ್ಕಾರ, ಎನ್.ಜಿ.ಓಗಳು ಬ್ಯಾಂಕುಗಳು) ಉಪಕ್ರಮಗಳು ಕರ್ನಾಟಕದಲ್ಲಿ ಸ್ವ-ಸಹಾಯ ಗುಂಪುಗಳ ವ್ಯಾಪ್ತಿಯನ್ನು ಗಮನಾರ್ಹವಾಗಿ ವಿಸ್ತರಿಸಿತು. 2003ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಸ್ತ್ರೀಶಕ್ತಿ ಸಂಘಗಳನ್ನು ಸ್ಥಾಪಿಸಲಾಯಿತು. ಇವುಗಳು ಗ್ರಾಮೀಣ ಪ್ರದೇಶದ ಬಡ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವರಲ್ಲಿ ಉಳಿತಾಯದ ಭಾವನೆಯನ್ನು ಉಂಟು ಮಾಡುವುದರ ಮೂಲಕ ಅವರ ಆರ್ಥಿಕ ಪ್ರಗತಿಗೆ ನೆರವಾಗಿವೆ. ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರವು ಸಹಕಾರಿ ಇಲಾಖೆಯ ಮೂಲಕವೂ ಸಹ ಮಹಿಳಾ ಸ್ವಸಹಾಯ ಸಂಘಗಳನ್ನು ಆಯೋಜಿಸುತ್ತಿದ್ದು, ಗುಂಪು ಮಾದರಿಯ ಸಾಲ ಸೌಲಭ್ಯಗಳನ್ನು ನೀಡುತ್ತಿದೆ. ಎಸ್.ಹೆಚ್.ಜಿ. ಬ್ಯಾಂಕು ಸಂಪರ್ಕ ಕಾರ್ಯಕ್ರಮವನ್ನು 1991–92 ರಲ್ಲಿ ಪ್ರಾರಂಭಿಸಿದ ನಂತರ ರಾಷ್ಟ್ರದ ಸ್ವ-ಸಹಾಯ ಸಂಘಗಳಿಗೆ ಮುಖ್ಯ ಸಾಲಗಳನ್ನು ಕರ್ನಾಟಕದ ಕೋಲಾರ ಪ್ರದೇಶದಲ್ಲಿನ ವೈಶ್ಯ ಬ್ಯಾಂಕು ನೀಡಿತು. 2018–19ರ ರಾಜ್ಯ ಆಯವ್ಯಯದಲ್ಲಿ ಕಾಯಕ ಯೋಜನೆ ಮತ್ತು ಸಂಜೀವಿನಿ ಯೋಜನೆಯ ಮೂಲಕ ಮಹಿಳಾ

ಸ್ವಸಹಾಯ ಸಂಘಗಳನ್ನು ಆರ್ಥಿಕವಾಗಿ ಪ್ರಬಲಗೊಳಿಸುವಂತಹ ವಿನೂತನ ನೆರವಿನ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸರ್ಕಾರವು ಜಾರಿಗೆ ತಂದಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದು. ಆದರೆ ಪುರಾತನ ಕಾಲದಿಂದ ಮುಂದುವರೆದು ಇಂದಿನ ಆಧುನಿಕ ಯುಗದಲ್ಲೂ ಕೂಡ ಭಾರತದ ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರ ಆಸಕ್ತಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಮಹಿಳೆಯರು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆ, ಅಸಮಾನತೆ, ಅನ್ಯಾಯ ಮತ್ತು ಲಿಂಗ ತಾರತಮ್ಯಕ್ಕೆ ಒಳಗಾಗುತ್ತಿದ್ದಾಳೆ. ಆದ್ದರಿಂದ ಮಹಿಳೆಯರ ಸ್ಥಾನಮಾನಗಳನ್ನು ಉತ್ತಮಗೊಳಿಸಲು ಮತ್ತು ಮಹಿಳೆಯರಲ್ಲಿ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸವನ್ನು ಬೆಳೆಸುವುದರ ಮೂಲಕ ಅವರಿಗೆ ಸ್ವಾಯತ್ತತೆಯ ವಾತಾವರಣ ಕಲ್ಪಿಸುವುದರ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ ನಮ್ಮ ಸಮಾಜದಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಕುಟುಂಬ ವ್ಯವಸ್ಥೆಯಲ್ಲಿ ಮತ್ತು ಜೀವನ ಸಂಗಾತಿಯಾಗಿ ಸಮಾನ ಪಾತ್ರವನ್ನು ನಿರ್ವಹಿಸಿದ್ದಾಳೆ. ಆದರೂ ಕೂಡ ಶೇ. 1 ಕ್ಕಿಂತ ಕಡಿಮೆ ಮಹಿಳೆಯರು ಮಾತ್ರ ಶಿಕ್ಷಣ, ಸ್ವಾತಂತ್ರ್ಯ, ಸಮಾನತೆ, ಆಸ್ತಿಯ ಹಕ್ಕು, ಸಾಮಾಜಿಕ ಸ್ಥಾನಮಾನಗಳನ್ನು ಅನುಭವಿಸಿದ್ದರು. ಉಳಿದ ಬಹುತೇಕ ಮಹಿಳೆಯರು ಈ ಅವಕಾಶಗಳಿಂದ ವಂಚಿತರಾಗಿದ್ದರು. ಮಹಿಳೆಯರ ಕಾರ್ಯಕ್ಷೇತ್ರ ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗಿದ್ದು ಅವಳ ದುಡಿಮೆ ಆದಾಯ ತರದ ಕೆಲಸವಾಗಿತ್ತು. ಇಂತಹ ಕಾಲಘಟ್ಟದಲ್ಲಿ ಸ್ತ್ರೀಯರಲ್ಲಿ ಜಾಗೃತಿ ಮೂಡಿಸಿ ಅವರನ್ನು ಸಂಘಟಿಸಿ, ಅವರ ಸ್ಥಾನಮಾನಗಳನ್ನು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಯ ಭಾಗವಹಿಸುವಿಕೆ ಮತ್ತು ಕೊಳ್ಳುವ ಸ್ವಾತಂತ್ರ್ಯಗಳನ್ನು ಮಹಿಳೆಗೆ ನೀಡಲಾಗಿದೆ.

ನಿಘಂಟಿನ ಪ್ರಕಾರ ಸಬಲೀಕರಣ ಎಂದರೆ ಅಧಿಕಾರ ಕೊಡುವುದು ಎಂದರ್ಥ. ಆದ್ದರಿಂದ ಸಬಲೀಕರಣವು ಮಹಿಳೆಯರನ್ನು ಸಬಲಗೊಳಿಸಲು ಅಧಿಕರ ಕೊಡುವುದನ್ನು ಸೂಚಿಸುತ್ತದೆ. ಸಬಲೀಕರಣದ ಕಲ್ಪನೆಯನ್ನು ಬಡವರು ಮತ್ತು ಹಿಂದುಳಿದ ವರ್ಗಗಳ ಸ್ಥಿತಿಯಲ್ಲಿ ಏನು ಬದಲಾವಣೆಯಾಗಬೇಕು ಎಂಬುದನ್ನು ಅರಿಯುವ ಸಾಧನವಾಗಿ ಬಳಸುತ್ತೇವೆ. ಮಹಿಳೆಯರ ಆರ್ಥಿಕ ಅಭಿವೃದ್ಧಿಯನ್ನು ಬಲಪಡಿಸುವುದು. ಮಹಿಳೆಯರಲ್ಲಿ ಜವಾಬ್ದಾರಿ ಮತ್ತು ಸಂವೇದನಾಶೀಲತೆಯನ್ನು ಹೆಚ್ಚಿಸುವುದು. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು. ಮಹಿಳೆಯರಿಗೆ ನಿರಾಕರಿಸಲಾಗಿರುವ ಎಲ್ಲಾ ಹಕ್ಕುಗಳನ್ನು ದೊರಕಿಸಿಕೊಡುವುದು. ಮಹಿಳೆಯರಿಗೆ ಸಮಾನ ಅವಕಾಶಗಳು, ಸೌಲಭ್ಯಗಳು ಮತ್ತು ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದು. ಗಂಡು-ಹೆಣ್ಣು ಎಂಬ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದು. ಮಹಿಳಾ ಶೋಷಣೆಯನ್ನು ತಪ್ಪಿಸುವುದು. ಸಾಮಾಜಿಕ ಬದಲಾವಣೆಗೆ ಅಗತ್ಯವಾದ ವಾತಾವರಣವನ್ನು ನಿರ್ಮಿಸುವುದು. ದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಜೀವನದ ಪ್ರಮುಖ ವಾಹಿನಿಯಲ್ಲಿ ಮಹಿಳೆಯರು ತಮ್ಮ ನ್ಯಾಯಯುತ ಸ್ಥಾನ ಪಡೆಯುವಂತೆ ಅವರಲ್ಲಿ ಆತ್ಮವಿಶ್ವಾಸ ಬೆಳೆಸಿ ಅವರಿಗೆ ಸ್ವಾಯತ್ತತೆಯ ವಾತಾವರಣ ಕಲ್ಪಿಸುವುದು. ರಾಷ್ಟ್ರದ ಅಭಿವೃದ್ಧಿಯಲ್ಲಿ ಅವರ ಪಾತ್ರ ಕುರಿತಂತೆ ಮಹಿಳೆಯರಲ್ಲಿ ಅರಿವು ಮೂಡಿಸುವುದು.

**ಸಾಹಿತ್ಯ ವಿಮರ್ಶೆ**

ಕಿರು ಹಣಕಾಸಿನ ಪರಿಕಲ್ಪನೆಯು ಮಹಿಳೆಯರಿಗೆ ಸಾಲ ಸೇವೆಗಳಿಗೆ ಪ್ರವೇಶವನ್ನು ಹೊಂದಿರುತ್ತದೆ. ಕಿರುಸಾಲ ಕಾರ್ಯಕ್ರಮ ಅತ್ಯಂತ ಕಡಿಮೆ ಜನರಿಗೆ ಸಣ್ಣ ಸಾಲಗಳನ್ನು ವಿತರಿಸುತ್ತದೆ. ಸ್ವಉದ್ಯೋಗ ಯೋಜನೆಗಳ ಆದಾಯವನ್ನು ಸೃಷ್ಟಿಸುವ ಮತ್ತು

ಅವುಗಳನ್ನು ಹಲವು ಕಾಳಜಿ ವಹಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಮತ್ತು ಅವರವರ ಕುಟುಂಬಗಳಿಗೆ ಈ ಕಾರ್ಯಕ್ರಮವು ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಯಾವುದೇ ಕೊರತೆಯಲ್ಲಿ ಕಿರುಬಂಡವಾಳವನ್ನು ಸಂಬಂಧಿಸಿದ ಸಾಹಿತ್ಯ, ಕಿರು ಬಂಡವಾಳ ಕಾರ್ಯಕ್ರಮದ ಪ್ರಭಾವವನ್ನು ಗುರುತಿಸಲು ವಿವಿಧ ರಾಷ್ಟ್ರಗಳಲ್ಲಿ ಅನೇಕ ಲೇಖಕರು ಪ್ರಮುಖ ಮೌಲ್ಯಮಾಪನ ಅಧ್ಯಯನಗಳನ್ನು ಮಾಡಿದ್ದಾರೆ. ಪೆರು ಮತ್ತು ಇತರ ಹಲವು ರಾಷ್ಟ್ರಗಳು, ದಕ್ಷಿಣ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಲ್ಲಿ ಕಿರು ಬಂಡವಾಳದ ಕುರಿತಾದ ಸಾಹಿತ್ಯವು ಸಂಬಂಧಿಸಿದ ವೈವಿಧ್ಯತೆಯನ್ನು ನೀಡುತ್ತದೆ. ಕಿರು ಹಣಕಾಸಿನ ಬಂಡವಾಳ ಕಾರ್ಯಕ್ರಮವು ಉದ್ಯೋಗವನ್ನು ಹೆಚ್ಚಿಸುವಲ್ಲಿ ಗಮನಾರ್ಹ ಧನಾತ್ಮಕ ಪರಿಣಾಮಗಳನ್ನು ಹೊಂದಿದೆ. ಬಡತನವನ್ನು ಕಡಿಮೆ ಮಾಡುವುದು, ಉಳಿತಾಯ ಸಂಪನ್ಮೂಲ ಸಂಗ್ರಹಣೆ ಬಂಡವಾಳ ಕುರಿತಾದ ಸಾಹಿತ್ಯವು ಸಂಬಂಧಿಸಿದ ವೈವಿಧ್ಯತೆಯನ್ನು ನೀಡುತ್ತದೆ. ಕಿರುಬಂಡವಾಳ ಕಾರ್ಯಕ್ರಮವು ಉದ್ಯೋಗವು ಹೆಚ್ಚಿಸುವಲ್ಲಿ ಗಮನಾರ್ಹ ಧನಾತ್ಮಕ ಪರಿಣಾಮಗಳನ್ನು ಹೊಂದಿದೆ. ಬಡತನವನ್ನು ಕಡಿಮೆ ಮಾಡುವುದು, ಉಳಿತಾಯ, ಸಂಪನ್ಮೂಲ ಸಂಗ್ರಹಣೆ, ಪಾಲ್ಗೊಳ್ಳುವ / ಭಾಗವಹಿಸುವ ಕುಟುಂಬಗಳು ಹೆಚ್ಚಿನ ಮಟ್ಟದಲ್ಲಿ ಆನಂದಿಸುತ್ತವೆ ಎಂದು ಹಲವಾರು ಅಧ್ಯಯನಗಳು ತೋರಿಸುತ್ತವೆ. ಭಾಗವಹಿಸಿದವರಿಗೆ ಹೋಲಿಸಿದರೆ ಜೀವನಮಟ್ಟ ಇದರ ಫಲಾನುಭವಿಗಳ ಪೈಕಿ ಆದಾಯ ದುರ್ಬಲತೆ ಕೂಡಾ ಕೆಲವು ಅಧ್ಯಯನಗಳು ಸಹ ಖಚಿತಪಡಿಸುತ್ತವೆ. ಅನೇಕ ರಾಷ್ಟ್ರಗಳ ಅನೇಕ ರಾಜ್ಯಗಳ ಸಂಶೋಧನೆಯ ಬಗ್ಗೆ ಸಾಕಷ್ಟು ಅಧ್ಯಯನ ಕೈಗೊಂಡಿದ್ದು ಆ ಸಾಹಿತ್ಯ ವಿಮರ್ಶೆಯನ್ನು ಈ ಕೆಳಗಿನ ಹೇಳಿಕೆಯ ಮೂಲಕ ದೃಢಪಡಿಸಬಹುದು.

ಮಹಮದ್ ಯೂನಸ್ (1988) ಕಿರು ಬಂಡವಾಳ ಸೇವೆಗಳ ಮೂಲಕ ಗೃಹ ಅಭಿವೃದ್ಧಿಗಾಗಿ ತಮ್ಮ ಕೌಶಲ್ಯಗಳನ್ನು ಬಳಸಬಹುದು. ಕುಟುಂಬದ ಬೆಳವಣಿಗೆ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಬಡವರು ಸಹಾ ಕೊಡುಗೆಯನ್ನು ನೀಡಬಹುದು ಹಸಿವು ಮತ್ತು ಬಡತನದ ವಿರುದ್ಧ ಹೋರಾಡಬಹುದು. ಕಿರು ಹಣಕಾಸು ಮಹಿಳೆಯರಿಗೆ ವಿವೇಚನೆ ನೀಡುವ ಮೂಲಕ ಆರ್ಥಿಕ ಬೆಳವಣಿಗೆಗೆ ಮಹಿಳೆಯರೂ ಕೊಡುಗೆ ನೀಡಬಹುದು ಎನ್ನುವುದರ ಮೂಲಕ ಮಹಮದ್ ಯೂನಸ್ ಮುಖ್ಯವಾಗಿ ಮಹಿಳೆಯರ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿದ್ದಾರೆ.

ಗ್ರಾಮಮೂರ್ತಿ (2000) ಗ್ರಾಮೀಣಾಭಿವೃದ್ಧಿ ಉದ್ದೇಶಗಳನ್ನು ಸಾಧಿಸಲು ಮತ್ತು ಎಲ್ಲಾ ಗ್ರಾಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಸಾಧಿಸಲು ಸ್ವಸಹಾಯ ಗುಂಪುಗಳನ್ನು ಸಮರ್ಥವಾಗಿ ವಿವರಿಸಿದ್ದಾರೆ. ಚಟುವಟಿಕೆಗಳ ಉದ್ದೇಶದಿಂದ ಮತ್ತು ಅವುಗಳನ್ನು ಉದ್ಯಮಶೀಲ ಮಹಿಳೆಯನ್ನಾಗಿ ಮಾಡಲು ಹಾಗೂ ಸ್ವ-ಸಹಾಯ ಗುಂಪುಗಳು ಉತ್ತಮ ಸಂಘಟನೆಯಾಗಿದೆ.

ರುದರ್‌ಫೋರ್ಡ್ ಮತ್ತು ಅರ್ಮುಂಡಂಜ್ ಮತ್ತು ಮಾರ್ಚುರ್ಜ್ 2015 ಕಿರು ಬಂಡವಾಳ ಮತ್ತು ಸೂಕ್ಷ್ಮ ಸಾಲ ನಡುವಿನ ವ್ಯತ್ಯಾಸವನ್ನು ವಿವರಿಸಿ ಸಾಲ ನಿರ್ದಿಷ್ಟವಾಗಿ ಬಡಜನರಿಗೆ ನೀಡಲಾದ ಸಾಲಗಳಿಗೆ ಉಲ್ಲೇಖಿಸಲ್ಪಡುತ್ತದೆ. ಆದರೆ ಕಿರು ಬಂಡವಾಳವು ಉಳಿತಾಯವನ್ನು ಸಂಗ್ರಹಿಸಲು ಸೂಕ್ಷ್ಮ ಸಾಲ ಇರುವುದು ಆದಾಯ ಕಡಿಮೆಯಾಗಿರುವ ಕುಟುಂಬಗಳಲ್ಲಿ ಉಳಿತಾಯದ ಭಾವನೆಯನ್ನುಂಟು ಮಾಡುವುದರ ಜೊತೆಗೆ ಅವರಿಗೆ ಅಗತ್ಯ ಸಾಲ ನೀಡುವುದು ಹಾಗೂ ಮಾರುಕಟ್ಟೆ ಗ್ರಾಹಕರಲ್ಲಿ ಪ್ರತಿಫಲದ ಆರ್ಥಿಕತೆಯನ್ನು ಅಳವಡಿಸಿಕೊಳ್ಳಿ ಎಂದಿದ್ದಾರೆ.

ಅಮರದೀಪ್ ಕೌರ (2005) ಕಿರು ಹಣಕಾಸು ಎಂದರೆ ಕೊರತೆ ಇರುವ ಗೃಹ ಅಥವಾ ನಗರ ಸೇವೆಗಳಾದ ಬಡತನ ನಿರ್ಮೂಲನಾ ಕಾರ್ಯಕ್ರಮವನ್ನು ಅಧ್ಯಯನ ಮಾಡುವುದಾಗಿದೆ. ಸೂಕ್ಷ್ಮ ಹಣಕಾಸಿನ ಸವಾಲುಗಳಲ್ಲಿ ಉದ್ದರಿ ಸಾಧನಗಳ ನಮ್ಯತೆಯ ಮಟ್ಟವನ್ನು ಗುರುತಿಸುವ ಮತ್ತು ಬಹುಸಾಲದ ಅಗತ್ಯತೆಗಳನ್ನು ಗುರುತಿಸುವ ಮತ್ತು ಕಡಿಮೆ ಆದಾಯ ಇರುವ ಸಾಲಗಾರರಿಗೆ ಅನ್ವಯಿಕೆ ಮಾಡುವ ಕಾರ್ಯಗಳನ್ನು ಒಳಗೊಂಡಿದೆ.

ನಾಗರಾಜು (2017) ಸ್ವಸಹಾಯ ಗುಂಪುಗಳನ್ನು ಬ್ಯಾಂಕುಗಳು ಗುರುತಿಸಬೇಕು ಮತ್ತು ಸ್ವಸಹಾಯ ಗುಂಪುಗಳ ಸದಸ್ಯರಿಗೆ ಬ್ಯಾಂಕುಗಳ ಮೂಲಕ ಹಣಕಾಸಿನ ಬೆಂಬಲವನ್ನು ಒದಗಿಸುವ ಕುರಿತಾದ ವಿಧಾನವನ್ನು ಸಾರ್ವಜನಿಕರಿಗೆ ತಿಳಿಸಬೇಕು ಎಂಬುದು ಇವರ ಅಭಿಪ್ರಾಯವಾಗಿದೆ.

ರಾಬರ್ಟ್ ಪಿಕ್ ಕ್ರಿಸ್ಟಿನಾ (2006) ಸ್ವಸಹಾಯ ಗುಂಪುಗಳ ಬ್ಯಾಂಕುಗಳಿಗೆ ಲಾಭದಾಯಕವಾದ ಕಕ್ಷಿದಾರರಾಗುತ್ತಾರೆಂಬುದನ್ನು ಇವರು ತಮ್ಮ ಲೇಖನದಲ್ಲಿ ಕಿರು ಹಣಕಾಸು ಮತ್ತು ಅಂತರರಾಷ್ಟ್ರೀಯ ಅನುಭವ ಹಾಗೂ ಭಾರತಕ್ಕೆ ಒಂದು ಪಾಠ ಎಂಬುವುದರಲ್ಲಿ ಉಲ್ಲೇಖಿಸಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಮಹಿಳಾಭಿವೃದ್ಧಿಗೂ ಕಿರು ಹಣಕಾಸಿನ ಬೆಳವಣಿಗೆಯ ಇರುವ ಸಂಬಂಧವನ್ನು ಅಧ್ಯಯನ ಮಾಡುವುದು.
- ಮಹಿಳಾ ಸಂಘಗಳ ಕಾರ್ಯಕ್ಷಮತೆಯನ್ನು ಅವುಗಳ ವಿವಿಧ ಸಂಸ್ಥೆಗಳು ರಚನೆ ಮಾಡಿರುವ ಮಹಿಳಾ ಸ್ವ–ಸಂಘಗಳ ಸ್ವರೂಪವನ್ನು ಅಧ್ಯಯನ ಮಾಡುವುದು.
- ಸ್ವಸಹಾಯ ಗುಂಪಿನ ಸದಸ್ಯರುಗಳ ಪುನರ್ ಅಭಿವೃದ್ಧಿ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಾಗಿ ವ್ಯವಹಾರಕ್ಕೂ ಇರುವ ಸಂಬಂಧಗಳನ್ನು ವಿಶ್ಲೇಷಿಸುವುದು.
- ವಿವಿಧ ಸಂಘಗಳು ರಚನೆ ಮಾಡಿರುವ ಸ್ವಸಹಾಯ ಗುಂಪುಗಳ ಮಹಿಳಾ ಸ್ವಸಂಘಗಳ ವಿವಿಧ ಮಾದರಿಗಳು ಹಾಗೂ ಚಟುವಟಿಕೆಗಳನ್ನು ಅವುಗಳ ಬೆಳವಣಿಗೆಳ ಮೂಲಕ ಅರ್ಥಮಾಡಿಕೊಳ್ಳುವುದು.

**ಅಧ್ಯಯನದ ಪ್ರಾಮುಖ್ಯತೆ**

ಸ್ವಸಹಾಯ ಗುಂಪುಗಳು ಹಣಕಾಸು ಮತ್ತು ಮಹಿಳಾ ಅಭಿವೃದ್ಧಿಗಳು ಬಹುಮುಖ್ಯವಾದ 3 ಪರಿಭಾವನೆಗಳಾಗಿವೆ. ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಕಿರು ಹಣಕಾಸು ಸಂಸ್ಥೆಗಳು ನೆರವಾಗುತ್ತಿವೆ. ಮಹಿಳೆಯರನ್ನು ಅಥವಾ ಆಕೆಯ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಮಹಿಳಾಭಿವೃದ್ಧಿ ಎಂದು ಕರೆಯುತ್ತವೆ. ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ದುರ್ಬಲರಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಆಕೆಯ ಸಬಲೀಕರಣದ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಮತ್ತು ಮಹಿಳೆಯು ಅನೇಕ ರಂಗಗಳಲ್ಲಿ ತಮ್ಮ ಸಾಧನೆಯನ್ನು ತೋರಿದ್ದಾರೆ. ಮಹಿಳೆಯರು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಪ್ರಬಲವಾಗದ ಹೊರತು ರಾಷ್ಟ್ರ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಆದ್ದರಿಂದ ಭಾರತದಲ್ಲಿ ಕಿರು ಹಣಕಾಸು ವ್ಯವಸ್ಥೆಯು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಮೂಲಕ ಮಹಿಳೆಯನ್ನು ಆರ್ಥಿಕವಾಗಿ ಸಬಲಳನ್ನಾಗಿಸುತ್ತದೆ. ಕಿರು ಹಣಕಾಸು ಮಹಿಳೆಯರ ಜೀವನವನ್ನು ಉತ್ತಮ ಪಡಿಸಲು ನೆರವಾಗುತ್ತದೆ. ಗ್ರಾಮೀಣ ಮಹಿಳೆಯರು ಬಡತನದ ವಿಷವರ್ತುಲದಿಂದ ಹೊರ ಬರುವಲ್ಲಿ ಕಿರು ಹಣಕಾಸು ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಗ್ರಾಮೀಣ ಆರೋಗ್ಯ ಮತ್ತು ಕಲ್ಯಾಣ ಹೆಚ್ಚಳದಲ್ಲಿ ಕಿರು ಹಣಕಾಸು ನೆರವಾಗಿದೆ. ಸುಸ್ಥಿರ ಅಭಿವೃದ್ಧಿಯ ಸಾಧನೆಯಲ್ಲಿ ಹಾಗೂ ಗ್ರಾಮೀಣ ಸಂಪನ್ಮೂಲಗಳ ಬಳಕೆ ಮತ್ತು ಉತ್ಪಾದಕ ಚಟುವಟಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನವು ವಿಶ್ಲೇಷಣಾತ್ಮಕವಾಗಿದ್ದು, ಸಂಶೋಧನಾ ಅಧ್ಯಯನದಲ್ಲಿ ಪ್ರಾಥಮಿಕ ಹಾಗೂ ಅನುಷಾಂಗಿಕ ದತ್ತಾಂಶಗಳನ್ನು ಸಂಗ್ರಹಿಸಲಾಗುವುದು. ಕಿರುಹಣಕಾಸು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುವುದು. ಪ್ರಾಥಮಿಕ ದತ್ತಾಂಶಗಳನ್ನು ಕ್ಷೇತ್ರ ಅಧ್ಯಯನದ ಮೂಲಕ ಪ್ರತಿನಿಧಿಗಳನ್ನು ಸಂದರ್ಶಿಸಿ ಫಲಾನುಭವಿಗಳಿಗೆ ಪ್ರಶ್ನಾವಳಿ ನೀಡುವ ಮೂಲಕ ಸಂಗ್ರಹಿಸಿಕೊಳ್ಳಲಾಗುತ್ತದೆ. ದ್ವಿತೀಯ ದತ್ತಾಂಶಗಳನ್ನು ಸರ್ಕಾರಿ ಪ್ರಕಟಣೆಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವರದಿಗಳು, ದಿನ ಪತ್ರಿಕೆಗಳು, ಮಾಸಿಕ, ವಾರ್ಷಿಕ ಪತ್ರಿಕೆಗಳಿಂದ ಸಂಗ್ರಹಿಸಲಾಗುತ್ತದೆ.

**ಸಂಶೋಧನಾ ಮಾದರಿ**

**ಗುಂಪು ಅಧ್ಯಯನ: ಒಂದು**

**(ಎಸ್.ಕೆ.ಆರ್.ಡಿ.ಪಿ ಮಾದರಿ)**

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಕಿರು ಹಣಕಾಸು ಮತ್ತು ಮಹಿಳಾ ಅಭಿವೃದ್ಧಿಯನ್ನು ಅವಲೋಕಿಸಲಾಗುವುದು. ಸದರಿ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿದ್ದು, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಈ ಏಳು ತಾಲ್ಲೂಕುಗಳಲ್ಲಿ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳ ಎಸ್.ಕೆ.ಆರ್.ಡಿ.ಪಿ ಮತ್ತು ಸಹಕಾರಿ ಮಹಿಳಾ ಸ್ವಸಹಾಯ ಮಾದರಿಯ ಒಟ್ಟು ತಲಾ 15 ಗುಂಪುಗಳನ್ನು ಆಯ್ದುಕೊಂಡು 300 ಫಲಾನುಭವಿಗಳಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಉದ್ದೇಶಿಸಲಾಗಿದೆ.

**ಅಧ್ಯಯನದ ಮಿತಿ**

ಉದ್ದೇಶಿತ ಸಂಶೋಧನೆಯು ಕಿರು ಹಣಕಾಸು ಮತ್ತು ಮಹಿಳಾಭಿವೃದ್ಧಿಯು, ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆ. ಈ ಸಂಶೋಧನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಿರು ಹಣಕಾಸಿನ ಪಾತ್ರ, ಮಹಿಳೆಯರ ಸ್ಥಿತಿ ಗತಿ, ಮತ್ತು ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಲಾಗುವುದು. ಇಲ್ಲಿ ಕಂಡುಬರುವ ಅಂಶಗಳು ಮತ್ತು ತೆಗೆದುಕೊಂಡ ನಿರ್ದಾರಗಳು ಕೇವಲ ಮಂಡ್ಯ ಜಿಲ್ಲೆಗೆ ಸೀಮಿತವಾಗಿದ್ದು, ಇವು ಪ್ರದೇಶದಿಂದ ಪ್ರದೇಶಕ್ಕೆ ಬಿನ್ನವಾಗಿರುತ್ತವೆ. ಅಂತೆಯೇ ಇಲ್ಲಿನ ಫಲಿತಾಂಶಗಳನ್ನು ಯಾವುದೇ ಕಾರಣಕ್ಕೂ ಸಾರ್ವತ್ರೀಕರಿಸುವಂತಿಲ್ಲ. ಎರಡು ಮಾದರಿಯ ಕಿರುಹಣಕಾಸಿನ ಎಸ್.ಕೆ.ಡಿ.ಆರ್.ಡಿ.ಪಿ ಮತ್ತು ಸಹಕಾರಿ ಸ್ವಸಹಾಯ ಸಂಘಗಳ ತಲಾ ಒಂದೊಂದು ಗುಂಪು ಮಾದರಿ ಅಧ್ಯಯನವನ್ನು (caste study) ಕೈಗೊಂಡಿದ್ದು ಅದರ ಪ್ರಾಥಮಿಕ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕೈವಲ್ಯ ರಾಮೇಶ್ವರ ಸ್ವ–ಸಹಾಯ ಸಂಘವು 25/01/2013ರಲ್ಲಿ ಸ್ಥಾಪನೆಯಾಗಿದೆ. ಈ ಸಂಘದ ಐಡಿ ನಂ 395122 ಆಗಿದ್ದು ಇವರು ಭೂರಹಿತರಾಗಿದ್ದು ಮನೆಯನ್ನು ಹೊಂದಿರುತ್ತಾರೆ. ಇವರು ಯಾವುದೇ ಸಾಕುಪ್ರಾಣಿ ಹೊಂದಿರುವುದಿಲ್ಲ. ಸಾಮಾಜಿಕ ಮೂಲ ಸೌಕರ್ಯಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ನಲ್ಲಿಯನ್ನು ಹೊಂದಿದ್ದು ಮೋಟಾರ್ ಬೈಕನ್ನು ಹೊಂದಿರುತ್ತಾರೆ. ಆಧುನಿಕ ಗೃಹಪಯೋಗಿ ಸರಕುಗಳಾದ ಟಿ.ವಿ, ಮೊಬೈಲ್, ಮಿಕ್ಸಿ, ಫ್ಯಾನ್, ಫ್ರಿಜ್, ಗ್ಯಾಸ್ ಸಂಪರ್ಕ ಹೊಂದಿದ್ದು ಸಾಮಾಜಿಕವಾಗಿ ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ.

ಶಿವಲೀಲಾ ಎಂಬ ತಾಲ್ಲೂಕು ಸಮನ್ವಯಾಧಿಕಾರಿಯ ಪ್ರೇರಣೆಯಿಂದ ಎಸ್.ಕೆ.ಆರ್.ಡಿ.ಪಿ ಅಡಿಯಲ್ಲಿ ಕೈವಲ್ಯ ರಾಮೇಶ್ವರ ಸಂಘವನ್ನು ಸ್ಥಾಪಿಸಿದ್ದು ಇದರಲ್ಲಿ 12 ಜನ ಸದಸ್ಯರು ಇರುತ್ತಾರೆ. ಉಳಿತಾಯದ ಗುರಿ ಹಾಗೂ ಆರ್ಥಿಕ ಪ್ರಗತಿಯ ಉದ್ದೇಶದಿಂದ ಸಂಘವನ್ನು ಸ್ಥಾಪಿಸಿರುತ್ತಾರೆ. ಉಳಿತಾಯದ ಗುರಿ ಹಾಗೂ ಆರ್ಥಿಕ ಪ್ರಗತಿಯ ಉದ್ದೇಶದಿಂದ ಸಂಘವನ್ನು

ಸ್ಥಾಪಿಸಿರುತ್ತಾರೆ. ಸಂಘದ ಸದಸ್ಯರು ಸಭೆಗೆ ನಿಗದಿತವಾಗಿ ಹಾಜರಾಗುವುದರ ಮೂಲಕ ಸಂಘದ ಯಶಸ್ಸಿಗೆ ಕಾರಣರಾಗಿದ್ದಾರೆ ಎಂಬ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಸದಸ್ಯರೆಲ್ಲರು ಕಾರ್ಯ ಪ್ರವೃತ್ತವಾಗಿರುವ ಬಗ್ಗೆ ಜ್ಯೋತಿಯವರಿಂದ ಮಾಹಿತಿಯನ್ನು ಸಂಗ್ರಹಿಸಿರುತ್ತೇವೆ. ಯೋಜನೆಯ ನಿಯಮಗಳನ್ನು ಪಾಲಿಸುವ ಬಗ್ಗೆ ತಿಳಿದುಕೊಳ್ಳಲಾಯಿತು.

ಎಸ್.ಕೆ.ಡಿ.ಆರ್.ಪಿಯಿಂದ ಸಾಲ ಪಡೆದು ಬೇಕರಿ ನಡೆಸುತ್ತಿದ್ದು ಇವರು ವಾರಕ್ಕೆ ಉಳಿತಾಯದ ಅಭ್ಯಾಸವಿದ್ದ ಇವರು ಆರಂಭದಲ್ಲಿ 2013–14ರಲ್ಲಿ ವಾರಕ್ಕೆ 2000 ರೂ ಉಳಿತಾಯ ಮಾಡುತ್ತಿದ್ದರೆ ಆದರೆ ಇಂದು ತಿಂಗಳಿಗೆ 8,000 ರಿಂದ 10,000 ಸಾವಿರದವರೆಗೆ ಉಳಿತಾಯ ಮಾಡುತ್ತಾರೆ.

ಸಂಘದ ಸೇರುವ ಮೊದಲು ಗೃಹಿಣಿಯಾಗಿದ್ದು ಯಾವುದೇ ಉಳಿತಾಯವಿರಲಿಲ್ಲ. ಆದರೆ ಖಏಖಆಕ ಯಿಂದ ಹೆಚ್ಚಿನ ಅನುಭವ ಪಡೆದಿದ್ದಾರೆ. ಇದುವರೆವಿಗೂ ಮನೆ ಮತ್ತು ಆಸ್ತಿಯನ್ನು ಅಡವಿಟ್ಟು ಇಂದೇ ಸಾಲವನ್ನು ಪಡೆಯತ್ತಿದ್ದರು. ಸಂಘದ ಸದಸ್ಯರಾದ ಮೇಲೆ ಅನೇಕ ಬಾರಿ ಸಾಲವನ್ನು ಪಡೆದು ನಮ್ಮ ಉಳಿತಾಯ ಮತ್ತು ಆದಾಯವನ್ನು ಹೆಚ್ಚಿಸಿಕೊಂಡಿರುತ್ತೇನೆ. ನಾನು ಸಂಘದಿಂದ ಮೊದಲನೇ ಬಾರಿಗೆ 10.000, ಎರಡನೇ ಬಾರಿ 25000, 3ನೇ ಬಾರಿ 50.000, ನಾಲ್ಕನೇ ಬಾರಿ 1.00000, 1.80.000, ಇತ್ತಿಚಿಗೆ 60 ಪೈಸೆ ಬಡ್ಡಿ 5/11/21 ರಲ್ಲಿ 3ಲಕ್ಷ ರೂಗಳನ್ನು 3ವರ್ಷದ ಅವಧಿಗೆ ಪಡೆದಿರುತ್ತಾರೆ. ವಾರಕ್ಕೆ 2400 ಕಟ್ಟಬೇಕಾಗಿದು ಹಣ ಮರುಪಾವತಿಗೆ ಅಧಾರವಾಗಿ ವ್ಯವಸಾಯ ರೇಷ್ಮೆ ಸಾಕಾಣಿಕೆ, ಹೈನುಗಾರಿಕೆಯಂತಹ ಸ್ವ–ಉದ್ಯೋಗ ಕೈಗೊಳ್ಳುತ್ತಿರುವುದು ನನ್ನ ಸಂದರ್ಶನದ ವೇಳೆ ಕಂಡುಬಂದಿರುತ್ತದೆ.

ಎಸ್.ಕೆ.ಆರ್.ಡಿ.ಪಿಯ ಸ್ವಸಹಾಯ ಸಂಘ ಸೇರುವ ಮೊದಲು ಹಣಕಾಸಿನ ಪರಿಸ್ಥಿತಿ ತುಂಬಾ ಕಷ್ಟರವಾಗಿತ್ತು ಸ್ವ–ಸಹಾಯ ಸಂಘ ಸೇರಿದ ಮೇಲೆ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ಮಹಡಿಮನೆ ಪಕ್ಕಾಮನೆ, ಕೊಳವೆಬಾವಿ, ರೇಷ್ಮೆಸಾಕಾಣಿಕೆ, ಹೈನುಗಾರಿಕೆಯಿಂದ ಆದಾಯ ಅಧಿಕಗೊಂಡಿದೆ. ಖಊಊಖ ಮೂಲಕ ಉಳಿತಾಯದ ಪ್ರಮಾಣವು ಅಧಿಕಗೊಂಡಿದ್ದು ಮಾಸಿಕವಾಗಿ 8 ರಿಂದ 10 ಸಾವಿರ ಹಣ ಉಳಿತಾಯ ಮಾಡಿ ಆರ್ಥಿಕವಾಗಿ ಸಬಲರಾಗಿದ್ದಾರೆ ಎನ್ನುವುದು ನನ್ನ ನೇರ ಸಂದರ್ಶನದ ವೇಳೆ ತಿಳಿದುಬಂದ ಖಚಿತ ಮಾಹಿತಿಯಾಗಿರುತ್ತವೆ.

**ಗುಂಪು ಅಧ್ಯಯನ: ಎರಡು (ಸಹಕಾರಿ ಮಾದರಿ)**

**ಸಹಕಾರಿ ಮಹಿಳಾ ಸ್ವಸಹಾಯ ಸಂಘ ಮಾದರಿ**

**ಶ್ರೀ ನಿಧಿ ಮಹಿಳಾ ಸ್ವ ಸಹಾಯ ಸಂಘ**

ಶ್ರೀ ನಿಧಿ ಮಹಿಳಾ ಸ್ವಸಹಾಯ ಸಂಘವು 2011 ರಲ್ಲಿ ಮಂಡ್ಯ ಜಿಲ್ಲಾ ಮದ್ದುರು ತಾಲೂಕಿನ ಕೆ.ಎಂ. ದೊಡ್ಡಿ (ಭಾರತೀನಗರ) ದಲ್ಲಿ 2011 ರಲ್ಲಿ ಸ್ಥಾಪನೆಯಾಗಿದೆ. ಇದು ಒಟ್ಟು 20 ಜನ ಸದಸ್ಯರನ್ನ ಒಳಗೊಂಡಿದ್ದು, ಸಂಘದ ಪ್ರತಿನಿಧಿಯಾದ ಸುಧಾ. ಹೆಚ್. ಅವರನ್ನ ವೈಯಕ್ತಿಕ ಸಂದರ್ಶನದ ಮೂಲಕ ಮಹಿಳಾ ಸ್ವಸಹಾಯ ಸಂಘಗಳ ಸ್ಥಾಪನೆಯ ಮೊದಲಿನ ಪರಿಸ್ಥಿತಿ ಹಾಗೂ ಸ್ವ–ಸಹಾಯ ಸಂಘದ ಸದಸ್ಯರಾದ ನಂತರ ಉಳಿತಾಯ ಮತ್ತು ಆದಾಯದ ಮೂಲಗಳಲ್ಲಿ ಹೇಗೆ ಹೆಚ್ಚಳವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಸಮಾಜದ ಮುಖ್ಯ ವಾಹಿನಿಗೆ ಬರುತ್ತಿದ್ದಾರೆ ಎನ್ನುವುದನ್ನ ಅವರ ಅನುಭವದ ಮಾತುಗಳಿಂದ ತಿಳಿಯಬಹುದಾಗಿದೆ.

ಸುಧಾ. ಹೆಚ್ ಇವರು ಪದವಿ ಪೂರ್ವ ಶಿಕ್ಷಣವನ್ನು ಪೂರೈಸಿದ್ದು 38 ವರ್ಷ ವಯಸ್ಸಿನವರಾಗಿದ್ದು ಇವರು ಶಿವಕುಮಾರ ಎಂಬ ಸಮನ್ವಯಾಧಿಕಾರಿಯ ಮೂಲಕ ಸಹಕಾರಿ ಸ್ವ–ಸಹಾಯ ಸಂಘಕ್ಕೆ ಸೇರಿದ ಮೇಲೆ ಇವರ ಆದಾಯ ಹೆಚ್ಚಾಗಿದೆ. ಉಳಿತಾಯದ ಮಿತಿಯಾಗಿ 500 ರೂಗಳನ್ನ ಮಾಸಿಕವಾಗಿ ಕೈಗೊಳ್ಳುತ್ತಿದ್ದು ಇವರು 2011 ರಿಂದಲೂ ಉಳಿತಾಯ ಮಾಡುತ್ತಿದ್ದಾರೆ, ಸಂಘ ಸೇರುವ ಮೊದಲು ತಿಂಗಳಿಗೆ ಕೇವಲ 2000

ಹಣವನ್ನ ಉಳಿತಾಯ ಮಾಡುತ್ತಿದ್ದರೆ ಸಂಘದಿಂದ ಸಾಲವನ್ನ ಪಡೆದು ಬಟ್ಟೆ ವ್ಯಾಪಾರ ಹಣ ಕಾಸಿನ ವ್ಯವಹಾರ ವ್ಯವಸಾಯ, ರೇಷ್ಮೆ ಕೃಷಿಯಿಂತಹ ಚಟುವಟಿಕೆಗಳನ್ನ ಕೈಗೊಳುತ್ತಿದ್ದು ತಿಂಗಳಿಗೆ 10,000 ಕೊ ಅಧಿಕ ಆದಾಯವನ್ನ ಆದಾಯಗಳಿಸುತ್ತಿದ್ದಾರೆ.

ಪಡೆದ ಸಾಲವನ್ನ ಉತ್ಪಾದಕ ಚಟುವಟಿಕೆಗಳ ಜೊತೆಗೆ ಮಕ್ಕಳ ವಿಧ್ಯಾಬ್ಯಾಸ ಹಾಗೂ ಆಭರಣಗಳನ್ನ ಕೊಳ್ಳಲು ಬಳಸಿಕೊಂಡಿದ್ದಾರೆ. ಇವರು ಆರಂಭದಲ್ಲಿ 2012–14 ರ ಅವದಿಯಲ್ಲಿ 10,000 ಸಾವಿರ ಸಾಲವನ್ನ, 2014–0216 ರ ಅವದಿಯಲ್ಲಿ 15,000 ಸಾವಿರ ರೂಗಳನ್ನು 2016–0218 ರಲ್ಲಿ 50,000 ಸಾವಿರ ರೂಗಳನ್ನು 2018–2020 ರ ಅವದಿಯಲ್ಲಿ 50,000 ರೂಗಳನ್ನ, 2022 ರ ಅವದಿಯಲ್ಲಿ ಮತ್ತು 50,000 ಸಾವಿರ ರೂಗಳನ್ನು ಸಾಲವಾಗಿ ಪಡೆದಿದ್ದಾರೆ.

ಸಾಲ ಮರು ಪಾವತಿಯ ಅವದಿಯ 2 ವರ್ಷಗಳಾಗಿದ್ದ ಹಳೆಯ ಸಾಲ ಮರುಪಾವತಿಸಿ ಹೊಸ ಸಾಲ ಪಡೆಯಲು ಉತ್ಸಾಕರಾಗಿದ್ದಾರೆ. ಸ್ವಸಹಾಯ ಸಂಘ ಸೇರಿದ ನಂತರ ಅರ್ಥಿಕ ಪರಿಸ್ಥಿತಿ ಸುದಾರಿಸಿದೆ. ಚಟುವಟಿಕೆಯ ಆದಾಯವು ಹೆಚ್ಚಾಗಿದೆ. ಕೃಷಿ ಚೆಮಗಳಲ್ಲಿ ಹಣಕಾಸನ್ನು ತೊಡಗಿಸಿ ಕೃಷಿ ಆದಾಯ / ಉತ್ಪಾದನೆ ಹೆಚ್ಚಾಗಲು ಕಾರಣವಾಗಿದೆ. ಜೊತೆ ಬ್ಯಾಂಕಿನಿಂದ ಕಡಿಮೆ ಬಡ್ಡಿಗೆ ಸಾಲ ತಂದು 1%, 2% ಸಾಲ ನೀಡುವುದರ ಮೂಲಕ ಸಾಮಾಜಿಕ ವ್ಯವಹಾರವನ್ನು ನಡೆಸುತ್ತಿದ್ದಾರೆ.

ನನ್ನ ಅಧ್ಯಯನಕ್ಕೆ ಒಳಪಟ್ಟ ಸ್ವ **ಎಸ್.ಕೆ.ಆರ್.ಡಿ.ಪಿ** ಮತ್ತು ಸಹಕಾರಿ ಸಂಘಗಳ ನಡುವೆ ಕೆಲವು ವೈರುಧ್ಯಗಳು ಕಂಡುಬಂದಿದೆ.

- ಎರಡೂ ಮಾದರಿಯಲ್ಲಿ ಸಾಲ ನೀಡಿಕೆಯ ಪ್ರಮಾಣದಲ್ಲಿ ವತ್ಯಾಸವಿರುವುದು ಕಂಡುಬಂದಿರುತ್ತದೆ.
- ಎರಡು ಮಾದರಿಯ ಸ್ವಸಹಾಯ ಸಂಘಗಳಿಗೆ ಬಡ್ಡಿಯ ದರದಲ್ಲಿ ವತ್ಯಾಸವಿರುವುದು ಕಂಡುಬಂದಿರುತ್ತದೆ.
- ಎರಡು ಮಾದರಿಯ ಉಳಿತಾಯದ ಮೊತ್ತದಲ್ಲಿ ವತ್ಯಾಸವಿರುವುದು ಕಂಡುಬಂದಿರುತ್ತದೆ.
- ಎರಡು ಮಾದರಿಯ ಸದಸ್ಯರು ಸಭೆ ಸೇರುವ ಕಾಲಾವಧಿಯ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ.
- ಎರಡು ಮಾದರಿಯ ವಿಮಾ ಸೌಲಭ್ಯದಲ್ಲಿ ವತ್ಯಾಸವಿರುವುದು ಕಂಡುಬಂದಿರುತ್ತದೆ.
- ಎರಡು ಮಾದರಿಯ ಸ್ವಸಹಾಯ ಸಂಘಗಳಿಗೆ ಸಾಲ ಮರುಪಾವತಿಯ ಅವದಿಯಲ್ಲಿ ವ್ಯತ್ಯಾಸವಿರುವುದು.
- ಎರಡು ಮಾದರಿಯ ಸ್ವಸಹಾಯ ಸಂಘಗಳಿಗೆ ಸಾಲ ನೀಡಿಕೆಯ ಮೊತ್ತದಲ್ಲಿ ಪ್ರಮಾಣದಲ್ಲಿ ವ್ಯತ್ಯಾಸವಿರುವುದು.

**ಪಲಿತಗಳು (ಎಸ್.ಕೆ.ಡಿ.ಆರ್.ಡಿ.ಪಿ ಮತ್ತು ಸಹಕಾರಿ ಸ್ವ–ಸಹಾಯ ಸಂಘಗಳಲ್ಲಿ)**

- ಎಲ್ಲರೂ ಸಮಾನ ಆರ್ಥಿಕ ಸಾಮಾಜಿಕ ಹಿನ್ನೆಲೆಯುಳ್ಳವರು ಎಂಬುದು ಈ ಸಂಶೋಧನೆಯಿಂದ ಕಂಡುಬಂದಿದೆ.
- ಎಲ್ಲಾ ಸದಸ್ಯರಲ್ಲಿ ಶಿಸ್ತು, ಪ್ರಾಮಾಣಿಕತೆ ಕಂಡುಬಂದು ಒಬ್ಬನು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಎಂಬ ಭಾವನೆ ಕಂಡುಬಂದಿದೆ.
- ವಿಚಾರ ವಿನಿಮಯಕ್ಕೆ ವಾರದ ಸಭೆಗಳಲ್ಲಿ ಹೆಚ್ಚು ಅನುಕೂಲವಾಗಿರುವುದು ಕಂಡುಬಂದಿದೆ.
- ಸಾಲದ ಸದ್ಬಳಕೆ ಆಂತರಿಕ ಸಾಲ ಸಾಲ ಜೋಡಣೆಯಲ್ಲಿ ಅಸಾಧಾರಣ ಪಾತ್ರವನ್ನು ಸಂಘದ ಸದಸ್ಯರು ನಿರ್ವಹಿಸುತ್ತಿದ್ದಾರೆ.
- ಸಾಲ ಮರುಪಾವತಿ ಉತ್ತಮ ರೀತಿಯಲ್ಲಿದೆ.
- ಸಾಮಾಜಿಕ ವ್ಯವಹಾರಗಳು ಅಧಿಕಗೊಂಡಿವೆ.
- ಪಡೆದ ಸಾಲವನ್ನು ಆರ್ಥಿಕ ಚಟುವಟಿಕೆಗಳಲ್ಲಿ ಬಳಸಿಕೊಂಡಿರುವುದು ಕಂಡುಬಂದಿದೆ.

- ಗ್ರಾಮೀಣ ಜನರು ದೇಶೀಯ ಬ್ಯಾಂಕಿಂಗ್ ವ್ಯವಸ್ಥೆಯಿಂದ ಮುಕ್ತವಾಗಿರುವು ಈ ಸಂಶೋಧನೆಯಿಂದ ಕಂಡುಬಂದಿದೆ.
- ಸರ್ಕಾರೇತರ ಸಂಸ್ಥೆಗಳಿಗಿಂತ **ಸ್ವ–ಸಹಾಯ ಸಂಘಗಳು ಹೆಚ್ಚು ಪ್ರಾಭಲ್ಯವನ್ನು ಹೊಂದಿರುವುದು** ಈ ಸಂಶೋಧನೆಯಿಂದ ಕಂಡುಬಂದಿದೆ.

**ವಿಫಲತೆಗಳು (ಎಸ್.ಕೆ.ಡಿ.ಆರ್.ಡಿ.ಪಿ ಮತ್ತು ಸಹಕಾರಿ ಸ್ವ–ಸಹಾಯ ಸಂಘಗಳಲ್ಲಿ)**

- ಉಳಿತಾಯಕ್ಕಿಂತ ಸಾಲ ಪಡೆಯಲು ಹೆಚ್ಚು ಆದ್ಯತೆ ನೀಡುತ್ತಿರುವುದು ಸ್ವ–ಸಹಾಯ ಸಂಘಗಳ ಸದಸ್ಯರಿಂದ ಕಂಡುಬಂದಿದೆ.
- ಸ್ವ–ಸಹಾಯ ಸಂಘಗದಲ್ಲಿನ ಅನಕ್ಷರಸ್ಥ ಜನರಿಗೆ ಸಾಲ ಜೋಡಣೆಯಂತಹ ವಿಷಯಗಳು ಅರ್ಥವಾಗುವುದಿಲ್ಲ.
- ಎಸ್.ಕೆ.ಆರ್.ಡಿ.ಪಿ ಮಾದರಿಯಲ್ಲಿ ಪ್ರತಿ ವಾರವು ಮರುಪಾವತಿ ಇರುವುದರಿಂದ ಗ್ರಾಮೀಣರಿಗೆ ಆಧಾಯದ ಮೂಲಗಳು ದೊರೆಯುವುದು ಕಷ್ಟವೆಂಬುದು ಸದಸ್ಯರ ಅಭಿಪ್ರಾಯವಾಗಿದೆ.
- ಚೆಕ್‌ಬೌನ್ಸ್ ಪ್ರಕರಣಗಳು ಕಂಡು ಬಂದಿರುವುದು ಇದೆ.
- ಬ್ಯಾಂಕು ಅಧಿಕಾರಿಗಳ ತಾರತಮ್ಯದ ಧೋರಣೆ ಇದೆ.

ಒಟ್ಟಾರೆ ಸುಧಾರ ಅವರ ಮಾತುಗಳಲ್ಲಿ ಹೇಳುವುದಾದರೆ ಇವರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗಿದೆ, ಉಳಿತಾಯ ಹೆಚ್ಚಾಗಿದೆ. ಸಾಮಾಜಿಕ ವ್ಯವಹಾರ ಹೆಚ್ಚಾಗಿದೆ. ಸಾಮಾಜಿಕ ಜವಾಬ್ದಾರಿ ಹೆಚ್ಚಳಗೊಂಡಿದೆ. ಸಾಮಾಜಿಕ ಗೌರವವು ಹೆಚ್ಚಾಗಿದೆ. ಬ್ಯಾಂಕಿನ ವ್ಯಾವಹಾರಗಳ ಸಂಪೂರ್ಣ ತಿಳುವಳಿಕೆಗೆ ಉಂಟಾಗಿದೆ.

**ಪರಾಮರ್ಶನ ಗ್ರಂಥಗಳು**


- ಗರಣಿ ಎನ್. ಕೃಷ್ಣಮೂರ್ತಿ. (2016). *ಕರ್ನಾಟಕ ಆರ್ಥಿಕ ಸಮೀಕ್ಷೆ ಮತ್ತು ಕರ್ನಾಟಕದ ಆರ್ಥಿಕತೆ.* ಚೈತ್ರ ಪ್ರಕಾಶನ.
- ಜನಾರ್ಧನ. (2018). *ಕರ್ನಾಟಕದಲ್ಲಿ ಆರೋಗ್ಯ.* ಜೀವನ ಪ್ರಕಾಶನ.
- *ಕರ್ನಾಟಕದ ಆರ್ಥಿಕ ಸಮೀಕ್ಷೆ 2016–17.* ಕರ್ನಾಟಕ ಸರ್ಕಾರ.
- ಕೃಷ್ಣಯ್ಯಗೌಡ ಹೆಚ್.ಆರ್. (2006). *ಭಾರತದ ಆರ್ಥಿಕತೆ.* ವಿದ್ಯಾನಿಧಿ ಪ್ರಕಾಶನ.
- ಕೃಷ್ಣಯ್ಯಗೌಡ ಹೆಚ್.ಆರ್. (2013). ಸ್ವ–ಸಹಾಯ ಗುಂಪುಗಳು. ಸ್ಪಂದನ ಪ್ರಕಾಶನ.
- ನಾಗಮೋಹನ್ ದಾಸ್ ಹೆಚ್.ಎನ್. (2017). *ಮಹಿಳಾ ಅಸಮಾನತೆ.* ಚಿಂತನ ಪುಸ್ತಕ.
- ಸುಜ್ಞಾನ ಮೂರ್ತಿ.ಬಿ. (2018). *ಮನೆಕೆಲಸ ಮತ್ತು ಹೊರಗಿನ ಕೆಲಸ.* ಲಡಾಯಿ ಪ್ರಕಾಶನ.
- ಶಂಕರರಾವ್, ಚ ನ. (2014). *ಭಾರತದಲ್ಲಿ ಮಹಿಳೆಯರು.* ಜೈ ಭಾರತ್ ಪ್ರಕಾಶನ.
- Borkman, T. (1976). Experiential Knowledge: A New Concept for the Analysis of Self-Help Groups. *Social Service Review*, *50*(3), 445–456.
- Raghvendra, D. (2014). Role of Shri Kshetra Dharmasthala Rural Development Project (SKDRDP) in Micro Finance Through SHGs –A Study in Shimoga District of Karnataka. *IOSR Journal of Economics and Finance*.
- Vani, K. (2015). A study of finance gap between commercial banks and micro small and medium enterprises with reference to Karnataka. *University*. https://shodhganga.inflibnet.ac.in/handle/10603/92504